

ಚಿತ್ರ: ಶಿಲ್ಪಾ ಕಬ್ಬಿಣಕಂತಿ

# ಕಲ್ಲುಗುಡ್ಡದ ರಹಸ್ಯ ಬಿಚ್ಚಿಟ್ಟ ಗುಂಡ

■ ಮಾರ್ಪಳ್ಳಿ ಆರ್. ಮಂಜುನಾಥ್

ನಾಲ್ಕೈದು ಜನ ಕಳ್ಳರಿಗೆ ಕಾಡಿನ ಮಧ್ಯದಲ್ಲಿರುವ ಕಲ್ಲು ಗುಡ್ಡದಲ್ಲಿ ಬೆಲೆಬಾಳುವ ಹರಳುಗಳು ಸಿಗುತ್ತವೆಯೆಂದು ಗೊತ್ತಾಯಿತು. ಒಂದಲ್ಲ ಎರಡಲ್ಲ ಕೋಟಿ ಕೋಟಿ ರೂಪಾಯಿಗಳ ವ್ಯವಹಾರವಾದ್ದರಿಂದ, ಅಕ್ಕಪಕ್ಕದ ಹಳ್ಳಿಗರಿಗೆ ವಿಷಯ ತಿಳಿಯದಂತೆ ಈ ಬಗ್ಗೆ ಏನಾದರೂ ಪ್ಲಾನ್ ಮಾಡಬೇಕೆಂದು ಯೋಚಿಸಿದರು.

ಆ ಗುಂಪಿನಲ್ಲಿದ್ದ ಕಳ್ಳನೊಬ್ಬನೆಂದನು 'ಹಿಂದೆ ಆ ಕಾಡಿನ ಆಸುಪಾಸಿನಲ್ಲಿ ಹುಲಿಗಳು ವಾಸವಾಗಿದ್ದವು. ಆದರೆ ಈಗ ಈ ಕಾಡಿನಲ್ಲಿ ಹುಲಿಗಳು ಇಲ್ಲವೆಂದು ಅರಣ್ಯ ಇಲಾಖೆಯವರು ಮಾಹಿತಿ ನೀಡಿದ್ದಾರೆ' ಎನ್ನುತ್ತಿದ್ದಂತೆ ಮತ್ತೊಬ್ಬ ಕಳ್ಳನೆಂದನು 'ಇದೇನು ದೊಡ್ಡ ವಿಚಾರವಲ್ಲ. ಪಕ್ಕದ ಕಾಡಿನಿಂದ ಹುಲಿ ಬಂದಿದೆ ಎಂದು ನಂಬಿಸಬಹುದು. ನಾವು ಹುಲಿಯಂತೆ ವೇಷ ಹಾಕಿಕೊಂಡು, ಹುಲಿಯ ಪಂಜಿನಿಂದ ಅಲ್ಲಿಗೆ ಬರುವವರನ್ನು ಗಾಯಗೊಳಿಸಿ ಹೆದರಿಕೆ ಹುಟ್ಟಿಸೋಣ, ಆಗ ಅಲ್ಲಿ ಹುಲಿಗಳು ಇವೆಯೆಂದು ಜನರ್‍ಯಾರು ಬರುವುದಿಲ್ಲ' ಎಂದು ಯೋಜನೆಯನ್ನು ರೂಪಿಸಿಯೇ ಬಿಟ್ಟನು.

ನಾಲ್ಕೈದು ಜನರಿರುವ ಕಳ್ಳರ ಗುಂಪು ಕಾಡಿನ ಮಧ್ಯೆದಲ್ಲಿರುವ ಕಲ್ಲುಗುಡ್ಡಕ್ಕೆ ಬಂದರು. ನೋಡಿದರೆ ಅಲ್ಲಲ್ಲಿ ಹೊಳೆಯುವ ಹರಳಿನಂತಹ ಕಲ್ಲುಗಳು. ಇವುಗಳನ್ನು ಒಡೆದು ಒಳ್ಳೊಳ್ಳೆಯ ಆಕಾರಕ್ಕೆ ವಿನ್ಯಾಸ ಮಾಡಿ ವಿದೇಶಕ್ಕೆ ಮಾರಿದರೆ ಕೋಟಿಗಟ್ಟಲೆ ಹಣ ಸಂಪಾದಿಸಬಹುದೆಂದು ಕೊಂಡರು.

ಆದರೆ ಅಲ್ಲಿಗೆ ಮೇಯಲು ದನ– ಕರುಗಳು ಬರುವುದೆಂಬ ವಿಚಾರ ಆ ಕಳ್ಳರಿಗೆ ತಿಳಿಯಿತು. ಆಗ ಗುಂಪಿನಲ್ಲಿದ್ದ ಒಬ್ಬ ಕಳ್ಳ 'ಈ ಬಗ್ಗೆ ಯೋಚನೆ ಮಾಡುವುದೇನಿದೆ? ಒಂದು ದನದ ಮೇಲೆ ಹುಲಿಯ ಪಂಜುವಿನಿಂದ ಗಾಯಗೊಳಿಸಿ, ರಕ್ತಬರುವಂತೆ ಮಾಡಿ, ಕಾಡಿನಿಂದ ಹೊರಗಟ್ಟಿ ಬಿಡೋಣ. ಆಗ ಹಳ್ಳಿಯ ಜನಕ್ಕೆ ಈ ಗುಡ್ಡದಲ್ಲಿ ಹುಲಿ ಬಂದಿದೆ ಎಂದು ತಿಳಿದು ಈ ಕಡೆ ಯಾರೂ ಸುಳಿಯುವುದಿಲ್ಲ' ಎಂದನು. ಈ ಕಳ್ಳನ ಮಾತಿಗೆ ಉಳಿದ ಕಳ್ಳರು ಮೆಚ್ಚುಗೆ ಸೂಚಿಸಿದರು.

ಕಳ್ಳರ ಗುಂಪು ಕಲ್ಲಿನ ಗುಡ್ಡದಲ್ಲಿ ಅಮೂಲ್ಯ ಬೆಲೆಬಾಳುವ ಕಲ್ಲಿನ ಹರಳುಗಳನ್ನು ಒಡೆಯುವ ಕೆಲಸ ಪ್ರಾರಂಭಿಸಿದರು.

ಅವರು ನಿರೀಕ್ಷಿಸಿದಂತೆ, ಆ ಕಲ್ಲಿನ ಗುಡ್ಡಕ್ಕೆ ದನಗಳು ಮೇಯಲು ಬಂದವು. ಒಬ್ಬ ಕಳ್ಳನು ಹುಲಿಯಂತೆ ವೇಷ ಧರಿಸಿಕೊಂಡು ಕೈಗೆ ಹುಲಿಯ ಪಂಜರ ಹಾಕಿಕೊಂಡು, ಒಂದು ಎತ್ತಿನ ಬೆನ್ನಿಗೆ, ಮುಖಕ್ಕೆ ರಕ್ತ ಬರುವಂತೆ ಮಾಡಿದನು, ದನಗಳನ್ನು ಬೆದರಿಸಿ ಅಲ್ಲಿಂದ ಓಡುವಂತೆ ಮಾಡಿದನು.

ಪಾಪ ದನಗಳು 'ಅಂಬಾ', 'ಅಂಬಾ' ಎನ್ನುತ್ತ ದಿಕ್ಕು ತೋರದೆ ಆ ಗುಡ್ಡದಿಂದ ಹೆದರಿ ಓಡಿಬಂದವು. ಅದನ್ನು ಕಂಡ ಗೋಪಾಲಕನು ದನಗಳು ಏಕೆ ಓಡಿ ಬರುತ್ತಿವೆ ಎಂದು ನೋಡಿದನು. ಒಂದು ಎತ್ತಿನ ಮೈಮೇಲೆ, ಮುಖದ ಮೇಲೆ ರಕ್ತ ಸೋರುತ್ತಿದ್ದು, ಹುಲಿಯ ಉಗುರಿನಿಂದ ಪರಚಿದಂತಾಗಿತ್ತು. 'ಓಹೋ ಆ ಕಲ್ಲಿನ ಗುಡ್ಡಕ್ಕೆ ಮತ್ತೆ ಹುಲಿಗಳು ಬಂದಿವೆ' ನಮ್ಮ ಈ ದನಗಳು ಹೇಗೋ ತಪ್ಪಿಸಿಕೊಂಡು ಬಂದಿವೆ ಎನ್ನುತ್ತ ಹೆದರಿ ಹುಲಿಗಳು ಕಲ್ಲಿನ ಗುಡ್ಡದಲ್ಲಿದೆ ಎಂದು ಕೂಗುತ್ತಾ ಮನೆಯತ್ತ ಓಡಲು ಆರಂಭಿಸಿದ.

ಹಳ್ಳಿಗರೆಲ್ಲರೂ ಹೆದರಿದರು. ತಮ್ಮ ದನಕರುಗಳನ್ನು ಆ ಕಲ್ಲಿನ ಗುಡ್ಡದ ಹತ್ತಿರ ಮೇಯಲು ಹೋಗದಂತೆ ತಡೆದರು. ತಾವು ಸಹ ಆ ಗುಡ್ಡದ ಬಳಿ ಹೋಗುವ ಗೋಜಿಗೆ ಹೋಗಿರಲಿಲ್ಲ.

ಆ ಹಳ್ಳಿಯಲ್ಲಿ ಒಬ್ಬ ಯುವಕನಿದ್ದ. ಅವನು ಕೆಲಸ ಮಾಡದ ಸೋಮಾರಿಯಾಗಿದ್ದ. ಅವನನ್ನು ಎಲ್ಲರೂ 'ಕೆಲಸಕ್ಕೆ ಬಾರದ ಸೋಮಾರಿ', 'ಉಂಡಾಡಿ ಗುಂಡ' ಎಂದು ಹಾಸ್ಯ ಮಾಡುತ್ತಿದ್ದರು. ಅವನು ಹಳ್ಳಿಯಲ್ಲಿದ್ದ ಈರಜ್ಜಿಯ ಮನೆಯಲ್ಲಿ ರಾಗಿ ರೊಟ್ಟಿ, ಬೆಣ್ಣೆ ಕದ್ದು ತಿಂದಿದ್ದನು. ಅವನನ್ನು ಬೈಯಲು ಈರಜ್ಜಿ ಎಲ್ಲೆಡೆ ಹುಡುಕುತ್ತಿದ್ದಳು. ಈರಜ್ಜಿಯ ಕೈಗೆ ಸಿಕ್ಕರೆ ಎಲ್ಲಿ ಬಾಯಿಗೆ ಬಂದಂತೆ ಬಯ್ದು ಬಿಡುತ್ತಾಳೋ ಎಂದು ಉಂಡಾಡಿಗುಂಡ, ಕಾಡಿನ ಕಡೆಗೆ ಓಡಿ ಬಂದಿದ್ದನು.

ದಾರಿ ತಪ್ಪಿ ಉಂಡಾಡಿಗುಂಡ ಕಲ್ಲಿನ ಗುಡ್ಡಕ್ಕೆ ಬರುತ್ತಿದ್ದಂತೆ, ಕಳ್ಳರ ಗುಂಪಿನಲ್ಲಿದ್ದ ಹುಲಿವೇಷಧಾರಿ ಕಳ್ಳನಿಗೆ 'ಓಹೋ ಯಾರೋ ಒಬ್ಬ ಹಳ್ಳಿಗ ಬಂದಿದ್ದಾನೆ. ಅವನನ್ನು ಹೆದರಿಸಿ ಓಡಿಸಬೇಕೆಂದು, ಹುಲಿಯಂತೆ ಬಂದ.

ಇದ್ದಕ್ಕಿದ್ದಂತೆ ಹುಲಿಯನ್ನು ನೋಡಿದ, ಗುಂಡ ಪಕ್ಕದಲ್ಲಿದ್ದ ಒಂದು ದೊಣ್ಣೆಯನ್ನು ಕೈಗೆತ್ತಿಕೊಂಡನು. ಹುಲಿಯನ್ನು ನೋಡಿ ಓಡಿ ಹೋಗುತ್ತಾನೆಂದು ಭಾವಿಸಿದ್ದ ಕಳ್ಳ ಏನು